ಬೇಡಿಕೆ ಸಂಖ್ಯೆ ೫೪ ವರ್ಕ್ಸ್

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರ್ಕ್ಸ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೪,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಪ್ರಕಟಣೆ

ಅಧ್ಯಕ್ಷರು.—ಬೆಂಗಳೂರು, ಗುಲ್ಬರ್ಗ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯಗಳ ಸೆನೆಟ್‌ಗಳಿಗೆ ಹಾಗೂ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಚುನಾವಣೆಯ ಬಗ್ಗೆ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳು ಒಮ್ಮತಕ್ಕೆ ಬಂದು ಸರ್ವಸಮ್ಮತವಾದ ಒಂದು ಪಟ್ಟಿಯನ್ನು ನೀಡಿದ್ದಾರೆ. ಆದ್ದರಿಂದ ಈ ಬಗ್ಗೆ ಚುನಾವಣೆಗಳು ಇರುವುದಿಲ್ಲ. ವಿವಿಧ ಸಮಿತಿಯ ಸದಸ್ಯರಗಳ ಪಟ್ಟಿ ಈ ರೀತಿ ಇರುತ್ತದೆ.

ಬೆಂಗಳೂರು ವಿಶ್ವವಿದ್ಯಾನಿಲಯ

ಶ್ರೀಯುತರುಗಳಾದ :

೧. ಕೆ. ಎಂ. ಮುನಿಯಪ್ಪ
೨. ಕೆ. ಎಚ್. ರಾಮಕೃಷ್ಣಯ್ಯ
೩. ಗಾಳಿ ಮಹದೇವಪ್ಪ
೪. ಡಾ॥ ಉಪಂವ್ಹಾಡಿ
೫. ಸಿ. ಪಿ. ವಂಡಲಗಿರಿಯಪ್ಪ

ಗುಲ್ಬರ್ಗ ವಿಶ್ವವಿದ್ಯಾನಿಲಯ

೧. ಕಲ್ಯಾಣರಾವ್ ಮೊಲಕೇರಿ
೨. ಹೆಚ್. ಸಿ. ಮಹದೇವ
೩. ಐ. ಬಿ. ಶಂಕರ್
೪. ಆರ್. ನಾರಾಯಣಪ್ಪ
೫. ಮೊಹಮದ್ ಉಮ್ಮರ್

ಮಂಗಳೂರು ವಿಶ್ವವಿದ್ಯಾನಿಲಯ

೧. ಬಿ. ಧರ್ಮಪ್ಪ
೨. ಇ. ನಂಜೇಗೌಡ
೩. ಗುರುಪ್ರಸಾದ್
೪. ಶಿವರಾಮ ರೆಡ್ಡಿ
೫. ಜೆ. ಎಸ್. ಆಚಾರ್

ರಾಜ್ಯ ಗ್ರಂಥಾಲಯ ಪ್ರಾಧಿಕಾರ

೧. ಚಂದ್ರಶೇಖರ್ ಮವಶಾಣಿ
೨. ಕೆಂಪೀರೇಗೌಡ
೩. ವಸಂತ ಬಂಗೇರ
೪. ಪ್ರಭಾಕರ ರಾಣೆ

ಇನ್ನೊಂದಂ ಪ್ರಕಟಣೆ

ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಪೇರೆಗೆ ಈ ದಿವಸ ಬಂಧಿಸಲಾದ ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಅವರನ್ನು ಇದೇ ದಿನ ಸಂಜೆ ೬-೩೦ ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಬೆಂಗಳೂರು ನಗರದ ಚಿಕ್ಕಪೇಟೆ ವಿಭಾಗದ ಸಹಾಯಕ ಆರಕ್ಷಕ ಆಯುಕ್ತರಿಂದ ನನಗೆ ಸಂದೇಶ ಬಂದಿದೆ.

ಈ ದಿನ ಮಧ್ಯಾಹ್ನ ೧೨-೧೫ಕ್ಕೆ ಪ್ರೇಕ್ಷಕರ ವೇದಿಕೆಯಿಂದ, ಘೋಷಣೆಗಳನ್ನು ಕೂಗುತ್ತಿದ್ದ ೧೦ ಜನರನ್ನು ಪಹರೆ ಮತ್ತು ನಿಗಾವಣೆ ಸಿಬ್ಬಂದಿಯವರು ಬಂಧಿಸಿದರು.

ಕೆಳಕಂಡ ಹೆಸರಿನ ೭ ವ್ಯಕ್ತಿಗಳು ಒಂದು ಗುಂಪಿನಲ್ಲಿದ್ದರು.—

೧. ಶ್ರೀ ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ಶ್ರೀ ರಾಮಕುಮಾರ್ ಎಂಬ ಕೃತಕ ಹೆಸರಿನ ಪ್ರವೇಶ ಪತ್ರ ಹೊಂದಿದ್ದ ಶ್ರೀ ಬಂಗವಾಡಿ ನಾರಾಯಣಪ್ಪ.

೨. ಶ್ರೀ ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ಪಾವಣ್ಣ ಎಂಬ ಕೃತಕ ಹೆಸರಿನ ಪ್ರವೇಶ ಪತ್ರ ಹೊಂದಿದ್ದ ಶ್ರೀ ಪಿಚಿಕಳ್ಳಿ ಶ್ರೀನಿವಾಸ್.

೩. ಶ್ರೀ ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ಅಧಿಕೃತ ಪ್ರವೇಶ ಪತ್ರವನ್ನು ಹೊಂದಿದ್ದ ಶ್ರೀ ಸೋಮಶೇಖರ್.

೪. ಪ್ರವೇಶ ಪತ್ರವನ್ನು ಹೊಂದಿರದಿದ್ದ ಶ್ರೀ ಕರ್ನಾಲ್ ನಾರಾಯಣಸ್ವಾಮಿ.

೫. ಶ್ರೀ ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ಅಧಿಕೃತ ಪ್ರವೇಶ ಪತ್ರವನ್ನು ಹೊಂದಿದ್ದ ಶ್ರೀ ಬೀರೇಗೌಡ.

೬. ಪ್ರವೇಶ ಪತ್ರವನ್ನು ಹೊಂದಿರದಿದ್ದ ಶ್ರೀ ಸೋಮಣ್ಣನವರ ಮಗ, ನಾರಾಯಣಸ್ವಾಮಿ ಪಾಗೂ

೭. ಪ್ರವೇಶ ಪತ್ರವನ್ನು ಹೊಂದಿರದಿದ್ದ ಶ್ರೀ ಶಂಕರಪ್ಪನವರ ಮಗ, ನಾರಾಯಣಸ್ವಾಮಿ.

ಎರಡನೇ ಗುಂಪಿನಲ್ಲಿ ಬಂಧಿಸಲಾದ ಕೆಳಕಂಡ ೩ ವ್ಯಕ್ತಿಗಳು.—

೧. ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ರಾಮಶಾಸ್ತ್ರಿ ಎಂಬ ಕೃತಕ ಹೆಸರಿನಲ್ಲಿ ಪ್ರವೇಶ ಪತ್ರವನ್ನೊಂದಿದ್ದ ರಾಮಮೂರ್ತಿ.

೨. ಶ್ರೀ ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ಮುನಿರೆಡ್ಡಿ ಎಂಬ ಕೃತಕ ಹೆಸರಿನಲ್ಲಿ ಪ್ರವೇಶ ಪತ್ರವನ್ನೊಂದಿದ್ದ ಶ್ರೀ ಎಂ. ರಾಜ.

೩. ಶ್ರೀ ಗೋಪಾಲ ಮುಕುಂದ ಕಾನಡೆಯವರಿಂದ ಪರಿಚಿತರಾದ ಬಾಚೇಗೌಡ ಎಂಬ ಕೃತಕ ಹೆಸರಿನಲ್ಲಿ ಪ್ರವೇಶ ಪತ್ರವನ್ನೊಂದಿದ್ದ ಮುನಿವೆಂಕಟಸ್ವಾಮಿ.

ಮೇಲ್ಕಂಡ ವ್ಯಕ್ತಿಗಳು ಪ್ರೇಕ್ಷಕರ ವೇದಿಕೆಯಲ್ಲಿ ತೀವ್ರತರವಾದ ಅವಿವೇಕ ವರ್ತನೆಯನ್ನು ವ್ಯಕ್ತಪಡಿಸಿದಕ್ಕಾಗಿ ವಶಕ್ಕೆ ತೆಗೆದುಕೊಂಡು ಈ ದಿನದ ಅಧಿವೇಶನವು ಮುಕ್ತಾಯಗೊಂಡ ನಂತರ ತೀವ್ರ ಎಚ್ಚರಿಕೆ ನೀಡಿ, ಬಿಡುಗಡೆ ಮಾಡಲಾಗುವುದು.

ಈ ವ್ಯಕ್ತಿಗಳಿಗೆ ಶಾಸಕರಾದ ಶ್ರೀ ಗೋಪಾಲ ಮುಕ್ಕಂದ ಕಾನಡೆಯವರು ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸು ಮಾಡಿದ್ದರು ಇಂತಹ ವ್ಯಕ್ತಿಗಳಿಗೆ ಇನ್ನು ಮುಂದೆ ಪ್ರವೇಶ ಪತ್ರಗಳನ್ನು ನೀಡಲು ಶಿಫಾರಸ್ಸು ಮಾಡುವ ಮುನ್ನ ಶ್ರೀ ಗೋಪಾಲ ಮುಕ್ಕಂದ ಕಾನಡೆಯವರು ಬಹಳ ಎಚ್ಚರವನ್ನು ವಹಿಸಬೇಕು. ಇನ್ನು ಮುಂದೆ ಇಂತಹ ಘಟನೆಗಳಿಗೆ ಅವಕಾಶ ಕೊಡದಂತೆ ಎಚ್ಚರಿಕೆ ವಹಿಸಬೇಕೆಂದು ಎಲ್ಲ ಮಾನ್ಯ ಸದಸ್ಯರುಗಳಿಗೂ ವಿನಂತಿಸುತ್ತೇನೆ.

ಈಗ ಸಭೆಯನ್ನು ನಾಳೆ ೧೧–೦೦ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ೮ ಗಂಟೆ ೪೦ ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ ೨೦ನೇ ಆಗಸ್ಟ್ ೧೯೮೫ರ ಮಂಗಳವಾರದಂದು ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)